# ರಸ್ತೆ ಬದಿಯ ಶಿಲ್ಪಿಗಳು



ಬೀದರರನಿಂದ ಹುಮನಾಬಾದ್‌ಗೆ ಹೋಗುವ ಮಾರ್ಗದಲ್ಲಿ ಬ್ಯಾಲಹಳ್ಳಿ ಎಂಬ ಒಂದು ಗ್ರಾಮವಿದೆ. ಈ ಗ್ರಾಮದಲ್ಲಿ ಅದೆಲ್ಲಿಂದಲೋ ಬಂದ ಕೆಲವು ವಿಗ್ರಹಕಾರರು ಬಹುವರ್ಷಗಳಿಂದ ಬೀಡು ಬಿಟ್ಟಿದ್ದಾರೆ. ರಸ್ತೆ ಪಕ್ಕದ ಬಯಲೇ ಅವರ ಕಾರ್ಯಾಗಾರ. ಸ್ಥಳೀಯವಾಗಿ ದೊರೆಯುವ ಕರಿ ಕಲ್ಲಿನಿಂದ ಅವರು ನಾನಾ ಬಗೆಯ ವಿಗ್ರಹಗಳನ್ನು ತೈಯಾರಿಸುತ್ತಾರೆ. ಈ ಭಾಗದ ಜನರು ಹೆಚ್ಚಾಗಿ ಪೂಜಿಸುವ ಶಿವ, ಗಣಪತಿ, ನಂದಿ, ಹನುಮಂತ, ನಾಗ ಮುಂತಾದ ವಿಗ್ರಹಗಳನ್ನು ಇವರು ಹೆಚ್ಚಾಗಿ ತಯಾರಿಸುತ್ತಾರೆ.

ಮುಂಗಡವಾಗಿ ಬುಕ್ ಮಾಡಿದರೆ ಮಾತ್ರ ಬೇರೆ ವಿಗ್ರಹಗಳನ್ನೂ ತಯಾರಿಸಿ ಕೊಡುತ್ತಾರೆ ಬೀದರ್‌ನಿಂದ ಹುಮನಾಬಾದಿಗೆ ಬಸ್ಸಿನಲ್ಲಿ ಸಂಚರಿಸುವ ಪ್ರಯಾಣಿಕರಿಗೆ ರಸ್ತೆಯ ಬದಿಯಲ್ಲಿ ಇವರು ಕೆತ್ತಿಟ್ಟ ವಿಗ್ರಹಗಳು ಸದಾ ಕಣ್ಣಿಗೆ ಬೀಳುತ್ತವೆ.

—ಮುರಲೀಧರ ಕುಲಕರ್ಣಿ, ಬೀದರ್

# ದನದ ಕೊಟ್ಟಿಗೆ



ಸಂಭ್ರಮ ಸಡಗರದಿಂದ ಕ್ರಿಸ್ತ ಜಯಂತಿಯನ್ನು ವಿಶ್ವದಾಂದ್ಯಂತ ಆಚರಿಸುತ್ತಾರೆ. ಎಲ್ಲಾ ಚರ್ಚ್‌ಗಳ ಮುಂದೆ ಹುಲ್ಲಿನ ಕೊಟ್ಟಿಗೆ ಕಟ್ಟಿ ಅದರಲ್ಲಿ ಬಾಲ ಯೇಸು ಮತ್ತು ಪೋಷಕರಾದ ಯೊಸೊಫ್ ಮತ್ತು ಮೇರಿ ಜೊತೆಗೆ ಕುರಿ, ದನ, ಗಿಡ, ಮರ ಹೂ ಬಳ್ಳಿಯನ್ನು ನಿರ್ಮಿಸಿರುತ್ತಾರೆ.

ಅದಕ್ಕೊಂದು ಕತೆಯುಂಟು ಅರಸನಾದ ಹೆರೋಧನ ಕಾಲದಲ್ಲಿ ಯೊಸೊಫ್ ಮತ್ತು ಮೇರಿ ಗಲೀಲಾಯ ಸೀಮೆಯಿಂದ ಬೆತ್ಲೇಹೆಮಿಗೆ ಬಂದರು. ಮೇರಿ ತುಂಬು ಗರ್ಭಿಣಿ ಅವರಿಗೆ ಉಳಿಯಲು ಜಾಗ ಸಿಗುವುದಿಲ್ಲ ಎಲ್ಲಾ ಧರ್ಮ ಛತ್ರಗಳು ತುಂಬಿ ಹೋಗಿರುತ್ತವೆ. ಅವರಿಗೆ ಆಶ್ರಯಕ್ಕೆ ಸಿಗುವುದು ಗೋದಲಿ ಮಾತ್ರ. ಯೇಸು ಜನನ ಅಲ್ಲೇ ಆಗುತ್ತದೆ. ಆ ನೆನಪಿಗಾಗಿ ಈ ಸುಂದರ ಗೋದಲಿ. ಹಾಗಾಗಿ ಚರ್ಚ್‌ಗಳ ಮುಂದೆ ನಿರ್ಮಿಸಿ ಅಲಂಕರಿಸುವುದು ಸಂಪ್ರದಾಯವಾಗಿದೆ.

—ಸೌಮ್ಯ ಹೆನ್ರಿ ಮದುಕರ್ ಚಿತ್ರದುರ್ಗ

# ಸಹಜತೆ ತುಂಬಿದ ಶಿಲ್ಪವನ



ಶಿಲ್ಪ ಕಲಾಲೋಕದ ಮಾಂತ್ರಿಕ ಟಿ.ಬಿ. ಸೊಲಬಕ್ಕನವರ ಇಂದು ನಮ್ಮೊಂದಿಗೆ ಇಲ್ಲ. ಆದರೆ, ನಾಡಿನ ಹಲವು ಕಡೆ ಅವರ ಕಲಾಸೃಷ್ಟಿಗಳು ಸದಾ ಮಾತಾಡುತ್ತಿವೆ. ಉತ್ತರಕನ್ನಡದ ಶಿರಸಿಯಲ್ಲಿ ಇವರ ಮುಂದಾಳತ್ವದಲ್ಲೇ ನಿರ್ಮಾಣಗೊಂಡಿದ್ದ ಶಾಲ್ಮಲಾ ಶಿಲ್ಪವನದಲ್ಲಿನ ಹಲವಾರು ಪ್ರಾಣಿಪಕ್ಷಿಗಳು, ವಿಶೇಷವಾಗಿ ಉತ್ತರಕನ್ನಡದ ಅರಣ್ಯವಾಸಿಗಳ ಕುಟುಂಬವನ್ನು ಅತ್ಯಂತ ಸಹಜವಾಗಿ ಬಿಂಬಿಸಿದ ಶಿಲ್ಪಿಗಳ ಕಲಾ ಚತುರತೆಗೆ ಬೇಷ್ ಎನ್ನಲೇಬೇಕು.

ಎಲ್ಲವೂ ಸಹಜ ಸೃಷ್ಟಿ ಎಂಬಂತಿರುವ ಈ ವನದಲ್ಲಿ ಉತ್ತರ ಕನ್ನಡದ ಅರಣ್ಯವಾಸಿ ಕುಟುಂಬಗಳಾದ ದನಗಾಹಿ ಗೌಳಿಗರ ಕುಟುಂಬಗಳನ್ನು, ಅವರ ಕಾಡು ಜೀವನದ ವಿವಿಧ ದೃಶ್ಯಾವಳಿಗಳನ್ನು ಪ್ರತಿಕೃತಿಯಾಗಿಸಿದ್ದು ವಿಶೇಷವಾಗಿದೆ. ಒಮ್ಮೆ ನೋಡಿದಾಗ ನಾವೇ ಹಾದಿ ತಪ್ಪಿ ಕಾಡೊಳಗೆ ಬಂದುಬಿಟ್ಟಿದ್ದೇವೊ ಎಂಬಂತಿದೆ ಇಲ್ಲಿನ ದೃಶ್ಯ. ಎಮ್ಮೆ, ಕಾವಲು ನಾಯಿ, ದನಗಾಹಿ ಗೌಳಿ ಎಲ್ಲವೂ ಎಷ್ಟೊಂದು ಸಹಜವಾಗಿದೆ.

—ಜಿ.ಎಂ. ಬೊಮ್ನಳ್ಳಿ